ಶೀಘ್ರ ಸಾಲ ಮಂಜೂರು ಮಾಡುವಂತೆಯೂ, ಸಹಾಯಧನ ಬಿಡುಗಡೆಗೊಳಿಸುವಂತೆಯೂ ಅಗ್ರಹ ಪೂರ್ವಕವಾಗಿ ಒತ್ತಾಯಿಸುತ್ತೇನೆ. ಯಾರೋ ಸಾಲ ಬಾಕಿ ಮಾಡಿಕೊಂಡ ತಪ್ಪಿಗಾಗಿ ಬೇರೆ ಯಾರಿಗೊ ಬರೆ ಎಳೆಯುವುದು ಸೂಕ್ತವಲ್ಲವೆಂದೂ ಶತಪ್ರಾನಗಳಿಂದ ಶೋಷಣೆಗೀಡಾದ ಬಡ ಪರಿಶಿಷ್ಟ ವರ್ಗದವರಿಗೆ ಈ ಸವಲತ್ತು ನೀಡಿ ಬಡತನದ ರೇಖೆಯಿಂದ ಮೇಲಕ್ಕೆತ್ತುವ ಪುಣ್ಯ ಕಾರ್ಯದಲ್ಲಿ ಶೀಘ್ರ ಕಾರ್ಯಪ್ರವೃತ್ತರಾಗಬೇಕಾಗಿಯೂ ವಿನಂತಿಸುತ್ತೇನೆ.

ಶ್ರೀ ಸಿ. ಬೈರೇಗೌಡ.—(ಮೀನುಗಾರಿಕೆ ಮಂತ್ರಿ)

ಸನ್ಮಾನ್ಯ ಅಧ್ಯಕ್ಷರೆ, ವರದಿ ತರಿಸಿ, ಇಲ್ಲಿ ಹೇಳಿಕೆ ಕೊಡುತ್ತೇನೆ.

## (ix) ಚಂದ್ರಗುತ್ತಿಯಲ್ಲಿ ನಡೆಯಂತ್ತಿರುವ ಬೆತ್ತಲೆಸೇವೆಯನ್ನು ತಡೆಯುವ ಬಗ್ಗೆ

ಶ್ರೀ ಪಂಪಾಪತಿ.—ದಿನಾಂಕ ೧೬-೩-೧೯೮೬ರ ಸುದ್ದಿ ಸಂಗಾತಿಯಲ್ಲಿ ಬಂದ ವರದಿಯ ಪ್ರಕಾರ ಸುಮಾರು ವರ್ಷಗಳಿಂದ ಸೊಂಬ ಪಂತ ಕ್ಷೇತ್ರದ ಚಂದ್ರಗುತ್ತಿ ಎಂಬಲ್ಲಿ ದೀನದಲಿತರು ತಮ್ಮ ಮೂಢ ಭಾವನೆಗಳ ಅಂತರಾಳದಿಂದ ರೇಣುಕಾದೇವಿಯ ಸೇವೆಯನ್ನು ಬೆತ್ತಲೆಯಾಗಿ ಸಲ್ಲಿಸುತ್ತಿದ್ದಾರೆ ಎಂಬ ಸುದ್ದಿ ಇಡೀ ಮಾನವ ಜನಾಂಗಕ್ಕೆ ತಲೆ ತಗ್ಗಿಸುವಂಥದ್ದು. ಇಂಥ ಮೂಢನಂಬಿಕೆಗಳನ್ನು ಸರ್ಕಾರ ತಡೆದು ಜನರಿಗೆ ವೈಜ್ಞಾನಿಕ ಯುಗಧ ಮಹತ್ವವನ್ನು ತಿಳಿಸಿ ಇಂಥ ಜನರಿಗೆ ಹೊಸ ಸಮಾಜದ ಅರಿವು ಮೂಡಿಸಿಕೊಡಬೇಕು. ಇದೇ ತಿಂಗಳು ೧೯.೨೦,೨೧ ರಂದು ನಡೆಯುವ ಈ ಬೆತ್ತಲೆ ಸೇವೆಯನ್ನು ತಡೆಯಲೇಬೇಕು ಇಂಥ ಬೆತ್ತಲೆ ಸೇವೆ ತಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ತಿಳಿಸಬೇಕೆಂದು ಕೇಳಲು ನಾವು ಇಚ್ಚಿಸುತ್ತೇವೆ.

ಶ್ರೀ ವಿ. ಎಲ್ ಪಾಟೀಲ್.—(ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಪಂಪಾಪತಿಯವರು ಹೇಳಿದ ಪ್ರಕಾರ ಎಷ್ಟೋ ವರ್ಷಗಳಿಂದ ದೇವಸ್ಥಾನದ ವಂಂದೆ ಈ ಬೆತ್ತಲೆ ಸೇವೆ ನಡೆಯುತ್ತಿದೆ. ಅದರ ಸಲುವಾಗಿ ಸಮಾಜ ಕಲ್ಯಾಣ ಇಲಾಖೆಯವರು ಪೋಲೀಸ್ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಸೋಷಿಯಲ್ ವರ್ಕರ್ಸ್ ಎಲ್ಲರನ್ನೂ ಕೂಡಿಸಿ ನಾಲ್ಕೈದು ಸೆಮಿನಾರ್‌ಗಳನ್ನು ಮಾಡಿದ್ದೇವೆ. ಈ ತರಹ ಮಾಡಬಾರದು ಎಂದು ಭಾಷಣಗಳನ್ನು ಮಾಡಿದ್ದೇವೆ, ಲಾವಣಿ ಹಾಡಿನ ರೂಪದಲ್ಲೂ ಪ್ರಚಾರ ಮಾಡುತ್ತಿದ್ದೇವೆ. ಲಾವಣಿ ಹಾಡಿನ ರೂಪದಲ್ಲೂ ಪ್ರಚಾರ ಮಾಡುತ್ತಿದ್ದೇವೆ. ಸಮಾಜ ಕಲ್ಯಾಣ ಇಲಾಖೆಯವರು ಎಷ್ಟರಮಟ್ಟಿಗೆ ಪ್ರಚಾರ ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ ಆದರೆ ಇದನ್ನು ಕಾಯಿದೆಯಿಂದ ನಿಲ್ಲಿಸುವುದು ಬಹಳ ಕಷ್ಟವಾಗುತ್ತದೆ ಎಲ್ಲರಿಗೂ ಗೊತ್ತು. ಜೈನ ಸಮಾಜದಲ್ಲಿ ಸ್ವಾಮಿಗಳು ಬೆತ್ತಲೆಯಾಗಿ ದಾರಿಯಲ್ಲಿ ಓಡಾಡುತ್ತಿದ್ದಾರೆ. ಈ ತರಹ ಇರುವುದರಿಂದ ಕಾಯಿದೆಯಿಂದ ಧರ್ಮದಲ್ಲಿ ಕೈಹಾಕಿ ಇದನ್ನು ತಡೆಗಟ್ಟುವುದು ಕಷ್ಟವಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಸಾಕಷ್ಟು ಪ್ರಚಾರ ಮಾಡುತ್ತಿದ್ದೇವೆ. ಬೇರೆ ಬೇರೆ ಲೀಡರ್ಸ್ ಕಡೆಯಿಂದ ಮತ್ತು ಸೆಮಿನಾರ್ ರೂಪದಿಂದ ಪ್ರಚಾರ ಮಾಡುತ್ತಿದ್ದೇವೆ.

## X ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ವಾರ ನಡೆದ ಹಲವಾರು ಬರಗಾಲ ಕಾಮಗಾರಿ ಕೆಲಸಗಳಿಗೆ ಬಟವಾಡೆ ಮಾಡಲು ಜಿಲ್ಲಾಧಿಕಾರಿಗಳ ಬಳಿ ಹಣ ಇಲ್ಲದೆ ಇರುವುದರಿಂದ ಎಲ್ಲಾ ಕೆಲಸಗಳನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೆಂದು ತಿಳಿದು ಬಂದಿದೆ, ಪರಿಸ್ಥಿತಿಯನ್ನು ಅರಿತು ಜಿಲ್ಲಾಧಿಕಾರಿಗಳು ದಿನಕ್ಕೊರಡು ತಂತಿ ಸಂದೇಶಗಳನ್ನು ಸರ್ಕಾರಕ್ಕೆ ೧೫ ದಿನಗಳಿಂದ ಕಳಿಸಿದಾಗ್ಯೂ ಯಾವ ಪ್ರಯೋಜನವಾಗಿಲ್ಲ ಮತ್ತು ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ. ತಕ್ಷಣ ಸರ್ಕಾರವು ಕನಿಷ್ಟ ೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡದಿದ್ದರೆ ಪರಿಸ್ಥಿತಿಯು ಗಂಭೀರತೆಯ ರೂಪವನ್ನು ತಾಳುವುದರಲ್ಲಿ ಅನುಮಾನವಿಲ್ಲ. ವಲಂದಿನ ದಿನಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ತಿಂಗಳಿಗೆ ಬಳ್ಳಾರಿ ಜಿಲ್ಲೆಗೆ ೨ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಈ ಮೂಲಕ ಅಗ್ರಹ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಿಂದ ವರದಿ ತರಿಸಿ ಅವರಿಗೆ ನಾನು ಉತ್ತರವನ್ನು ಕೊಡುತ್ತೇನೆ.

## XI ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಚುನಾವಣೆಯಲ್ಲಿ ಗೊಂದಲಮಯ ಪರಿಸ್ಥಿತಿ ಉಂಟಾಗಿರುವ ಬಗ್ಗೆ

ಶ್ರೀ ವೇದಾಂತ ಹೆಬ್ಬಿಗೆ.—ಅಧ್ಯಕ್ಷರೇ, ಕರ್ನಾಟಕ ಸಾಹಿತ್ಯ ಪರಿಷತ್ತು ಇಂದು ಒಂದು ಗೊಂದಲಮಯ ಸಂಸ್ಥೆಯಾಗಿದೆ. ಇಲ್ಲಿಯ ಸದಸ್ಯರುಗಳು ಕನ್ನಡ ಸಾಹಿತ್ಯ, ಭಾಷೆ ಹಾಗೂ ಕರ್ನಾಟಕದ ಹಿತಚಿಂತನೆಯನ್ನು ಮರೆತು ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಿರಿಯು ಕುರ್ಚಿಯೇ ಪ್ರಾಧಾನ್ಯ ಎಂಬ ವಾತಾವರಣವನ್ನು ಜನರಲ್ಲಿ ಮೂಡಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಜನರಿಗಿದ್ದ ವಿಶ್ವಾಸ ತಪ್ಪಿ ಹೋಗುವ ಹಾದಿಯಲ್ಲಿ ನಡೆಯುತ್ತಿರುವುದು ಸತ್ಯಾಂಶದ ವಿಷಯ. ಇದೀಗ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ನಡೆದ ಚುನಾವಣೆಯಲ್ಲಿ ನಡೆದ ಅಕ್ರಮಗಳ ಬಗ್ಗೆ ಕರ್ನಾಟಕದ ಪ್ರಮುಖ ಸಾಹಿತಿಗಳು ಹೇಳಿಕೆಯನ್ನು ಇತ್ತು ಇಲ್ಲಿ ನಡೆಯುತ್ತಿರುವ ಕೆಳಮಟ್ಟದ ರಾಜಕಾರಣದ ಬಗ್ಗೆ ಆತಂಕವನ್ನು ವ್ಯಕ್ತ ಪಡಿಸಿದ್ದಾರೆ, ಕನ್ನಡ ಸಾಹಿತ್ಯ ಪರಿಷತ್ತಿನ ಹಿತದೃಷ್ಟಿಯಿಂದ ಸರ್ಕಾರವು ಕೂಡಲೇ ಇತ್ತೀಚೆಗೆ ನಡೆದ ಚುನಾವಣೆ ಬಗ್ಗೆ ನ್ಯಾಯಾಂಗ ತನಿಖೆಯನ್ನು ಜಡಿಸಬೇಕು, ಮತ್ತು ಇಲ್ಲಿಯ ಕಲುಷಿತ ವಾತಾವರಣವನ್ನು ನಿರ್ಮೂಲ ಮಾಡುವ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡು ಇಡೀ ಕರ್ನಾಟಕ ಹಾಗೂ ಅಖಿಭಾರತ ಮಟ್ಟದಲ್ಲಿ ಖ್ಯಾತಿಗಳಿಸಿರುವ ಹಾಗೂ ಕನ್ನಡಿಗರ ವಿಶ್ವಾಸಕ್ಕೆ ಪಾತ್ರರಾಗಿರುವ ಕನ್ನಡ ಸಾಹಿತಿಯೊಬ್ಬರನ್ನು ಅಧ್ಯಕ್ಷರಿಗೆ ನಾಮಕರಣ ಮಾಡಬೇಕೆಂದು ಒತ್ತಾಯಿಸಿ ಸಂಬಂಧಿಸಿದ ಸಚಿವರ ಗಮನವನ್ನು ಸೆಳೆಯುವುದಾಗಿ ಸಂತೈಸುತ್ತೇನೆ.

ಶ್ರೀ ಎ. ಜೀವರಾಜ ಆಳ್ವ (ವಾರ್ತಾ ಮತ್ತು ಯುವಜನ ಸೇವಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಾಹಿತ್ಯ ಪರಿಷತ್ತು ಸರ್ಕಾರದ ಆನುದಾನವನ್ನು ಪಡೆಯುತ್ತಿರುವ ಒಂದು ಸ್ವಾಯತ್ತ ಸಂಸ್ಥೆ ರಿಜಿಸ್ಟ್ರಾರ್ ಆಫ್ ಸೊಸೈಟಿ ಕೆಳಗೆ ಬರುವಂತಹ ಸಂಸ್ಥೆ ಇದು. ಇಂತಹ ಸಂಸ್ಥೆಗಳಿಗೆ ಸರ್ಕಾರದ ಹಸ್ತಕ್ಷೇಪ ಸಲ್ಲದು ಎಂಬ ವಾದ ನಮ್ಮದಾಗಿರುತ್ತದೆ. ಆದರೂ ಕೂಡಾ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಹಲವಾರು ಟೀಕೆಗಳನ್ನು ಒಂದೇ ವಿಭಾಗದ ಸಾಹಿತಿಗಳು ಮಾಡಿದ್ದಾರೆ. ಹಲವಾರು ಹಿರಿಯ ಸಾಹಿತಿಗಳು ಕೂಡಾ ಇದರ ಬಗ್ಗೆ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಈ ಚುನಾವಣೆಯನ್ನು ರದ್ದು ಮಾಡಬೇಕೆಂದೂ. ಹಾಗೂ ಆಲ್ಲಿಗೆ ಸರ್ಕಾರದ ಅಡ್ಮಿನಿಸ್ಟ್ರೇಟರ್‌ರನ್ನು ನೇಮಕ ಮಾಡಬೇಕೆನ್ನುವ ಮಾತನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಆದರೂ ಕೂಡಾ ಈ ಸಮಗ್ರ ವಿಚಾರಗಳನ್ನು ಗಮನಿಸಿ ಸರ್ಕಾರ ಒಂದು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವ ಯೋಚನೆ ಮಾಡಿದೆ ಹಾಗೂ ಇದರ ವಿಚಾರವಾಗಿ ಕೂಲಂಕಷವಾದ ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಸಮಯ ಬೇಕಾಗುತ್ತದೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಯಾವ ಒಂದು ವಿಚಾರದ ಬಗ್ಗೆ ಈ ಒಂದು ಸಾಹಿತ್ಯ ಪರಿಷತ್ತು ಇದೆಯೋ ಆ ಒಂದು ವಿಚಾರದ ಬಗ್ಗೆ ಹಾಗೂ ಅದರ ಮುನ್ನಡೆ ಬಗ್ಗೆ ಬಿಯಾಂಡ್ ದಟ್ ಎಂದರೆ ಅದರ ಒಂದು ಪರಿಮಿತಿಯನ್ನು ಮೀರಿ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಆ ರೀತಿಯ ಕೆಲವಾರು ಕಾರ್ಯಕ್ರಮಗಳಿಗಾಗಿ ಸರ್ಕಾರ ಅನುದಾನವನ್ನೂ ಸಹಾ ನಿಲ್ಲಿಸಿವೆ. ಮಾನ್ಯ ಸದಸ್ಯರು ಹೇಳಿದ ಸಲಹೆಗಳನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳುತ್ತದೆಂದು ತಮ್ಮ ಮಾಹಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ಅಧ್ಯಕ್ಷರೇ, ೭೫ ಸಾವಿರ ರೂಪಾಯಿಗಳ...

ಅಧ್ಯಕ್ಷರು.—ವಿವರಣೆ ಕೇಳಲು ಅವಕಾಶ ಇಲ್ಲ. ವಿಪ್ ಅವರೇ ಅವರಿಗೆ ಸ್ವಲ್ಪ ಹೇಳಿ.